# ಮಾಧುರಿ ಬ್ಯುಸಿ



ಮಾಧುರಿ ದೀಕ್ಷಿತ್ ಮತ್ತೆ ಬಾಲಿವುಡ್‌ನಲ್ಲಿ ಬ್ಯುಸಿ ಆಗಿದ್ದಾರೆ. ಮರಾಠಿಯಲ್ಲಿ ಅವರು ನಟಿಸಿದ 'ಬಕೆಟ್ ಲಿಸ್ಟ್' ಬಾಕ್ಸಾಫೀಸ್‌ನಲ್ಲಿ ಹಿಟ್ ಆಗಿದೆ. ಜತೆಗೇ ಇನ್ನಷ್ಟು ಹಿಂದಿ ಚಿತ್ರಗಳಲ್ಲಿ ನಟಿಸಲು ಸಹಿ ಹಾಕಿ ಆಗಿದೆ. ಮಾಧುರಿ ನಟಿಸಿರುವ 'ಕಲಂಕ್' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಅಲಿಯಾ ಭಟ್, ವರುಣ್ ಧವನ್, ಸಂಜಯ್ ದತ್‌ಗೆ ಶೂಟಿಂಗ್ ಅನುಭವ ವಿಭಿನ್ನವಾಗಿತ್ತು ಎನ್ನುವುದು ಮಾಧುರಿಯ ಹರ್ಷಕ್ಕೆ ಕಾರಣವಾಗಿದೆ.

ಇದರ ಜೊತೆಗೆ ಕರಣ್ ಜೋಹರ್ ನಿರ್ಮಾಣದ ಹೊಸ ಚಿತ್ರದಲ್ಲಿ ಶ್ರೀದೇವಿ ನಿರ್ವಹಿಸಲು ಒಪ್ಪಿದ್ದ ಪಾತ್ರವನ್ನು ಈಗ ಮಾಧುರಿ ನಿರ್ವಹಿಸುವುದು ಖಚಿತವಾಗಿದೆ. ಈ ಚಿತ್ರದ ಹೆಸರನ್ನು 'ಸಿದ್ದತ್' ಎಂದು ಊಹಿಸಲಾಗಿತ್ತು. ಆದರೆ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ ಎಂದು ಕರಣ್ ಟ್ವೀಟ್ ಮಾಡಿದ್ದಾರೆ. ಅಜಯ್ ದೇವಗನ್, ಅನಿಲ್ ಕಪೂರ್ ಮುಂತಾದವರ ತಾರಾಗಣ ಇರುವ ಇನ್ನೊಂದು ಹಾಸ್ಯ ಚಿತ್ರ 'ಟೋಟಲ್ ಧಮಾಲ್'ನಲ್ಲೂ ಮಾಧುರಿ ಮಿಂಚಲಿದ್ದಾರೆ.

ಶಾರೂಕ್, ಅಮೀರ್, ಸಲ್ಮಾನ್, ಸೈಫ್– ಈ ನಾಲ್ಕೂ ಖಾನ್‌ಗಳ ಜತೆ ನಟಿಸಿ ಜನಪ್ರಿಯತೆಯಲ್ಲಿ ಉತ್ತುಂಗಕ್ಕೆ ಏರಿದ್ದ ಮಾಧುರಿಗೆ ಇತ್ತೀಚೆಗೆ 'ನಿಮ್ಮ ಅಚ್ಚುಮೆಚ್ಚಿನ ಖಾನ್ ಯಾರು?' ಎಂದು ಕೇಳಿದರೆ, 'ತೈಮೂರ್ ಅಲಿ ಖಾನ್' ಎಂಬ ಬುದ್ಧಿವಂತಿಕೆಯ ಉತ್ತರ ಬಂತಂತೆ! ಮಾಧುರಿ ಉತ್ತರದಲ್ಲಿ ತನ್ನ ಮಗನ ಹೆಸರು ಕೇಳಿ ಸೈಫ್ ಅಲಿ ಖಾನ್ ಮೊಗ ಮೊರದಗಲ ಆಯಿತಂತೆ!



# ಇರ್ಫಾನ್: ಸದ್ಯಕ್ಕೆ ಬರುವುದಿಲ್ಲ

ಲಂಡನ್ನಿನಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವ ಇರ್ಫಾನ್ ಖಾನ್, ಸದ್ಯಕ್ಕೆ ಭಾರತಕ್ಕೆ ಮರಳುವುದಿಲ್ಲ ಎನ್ನುವುದು ಖಚಿತವಾಗಿದೆ. ಆಗಸ್ಟ್ ಮೊದಲ ವಾರದಲ್ಲಿ ಬಿಡುಗಡೆಗೆ ಸಿದ್ಧವಾಗಿರುವ ಆತ ನಟಿಸಿದ ಹೊಸ ಚಿತ್ರ 'ಕಾರ್‌ವಾನ್' ಸಂಭ್ರಮದಲ್ಲಿ ಆತ ಭಾಗವಹಿಸುವುದಿಲ್ಲ ಎನ್ನುವುದು ಚಿತ್ರತಂಡಕ್ಕೆ ದುಃಖ ತಂದಿದೆ. 'ಆದರೆ ಚಿಕಿತ್ಸೆಗೆ ಆತ ಸ್ಪಂದಿಸುತ್ತಿದ್ದು, ಕ್ಯಾನ್ಸರ್ ಗುಣವಾಗುವ ಭರವಸೆ ಹುಟ್ಟಿದೆ' ಎಂದು ಚಿತ್ರತಂಡಕ್ಕೆ ಸಿಕ್ಕಿರುವ ಸಂದೇಶದಿಂದ ಖುಷಿಯೂ ಆಗಿದೆ.

ಮಲಯಾಳಂನ 'ಸೂಪರ್ ಹೀರೊ' ಮಮ್ಮುಟ್ಟಿಯ ಪುತ್ರ ದುಲ್ಖರ್ ಸಲ್ಮಾನ್ ನಟಿಸಿರುವ ಮೊದಲ ಹಿಂದಿ ಚಿತ್ರ 'ಕಾರ್‌ವಾನ್' ಹಾಸ್ಯಮಯ ಕಥೆ ಹೊಂದಿದೆ. ದುಲ್ಖರ್ ಮತ್ತು 'ವೆಬ್ ಸಿನಿಮಾಗಳ ಸುಂದರಿ' ಮಿಥಿಲಾ ಪಾಲ್ಕರ್ ಈ ಚಿತ್ರದ ಜೋಡಿಯಾದರೂ, ಚಿತ್ರಕಥೆಯಲ್ಲಿ ದೊಡ್ಡ ಪಾಲು ಹೊಂದಿರುವ ಇರ್ಫಾನ್ ಖಾನ್ ಮುಖ್ಯ ಆಕರ್ಷಣೆಯಾಗಿದ್ದರು. ಈಗ ಇರ್ಫಾನ್ ಇಲ್ಲದೆ ಚಿತ್ರದ ಪ್ರಮೋಷನ್‌ನಲ್ಲಿ ಹೀರೊ ಮತ್ತು ಹೀರೋಯಿನ್ ಭಾಗವಹಿಸಿದ್ದಾರೆ.

ಇರ್ಫಾನ್ ಖಾನ್ ಇತ್ತೀಚೆಗೆ ಬಾಲಿವುಡ್‌ನಲ್ಲಿ ತಮ್ಮದೇ ಆದ ಇಮೇಜ್ ಮತ್ತು ಜನಪ್ರಿಯತೆ ಹೊಂದಿದ್ದು, ಕೈತುಂಬ ಚಿತ್ರಗಳಿದ್ದವು. ದೀಪಿಕಾ ಜತೆಗೆ ಹಿಂದೆ ಪಿಕು ಚಿತ್ರದಲ್ಲಿ ಈತ ನೀಡಿದ ಮನೋಜ್ಞ ಅಭಿನಯ ಮನೆಮಾತಾಗಿತ್ತು. ಈ ಹಿನ್ನೆಲೆಯಲ್ಲೇ ಈ ವರ್ಷ ದೀಪಿಕಾ ಜತೆಗೆ ಮತ್ತೊಂದು ಸಿನಿಮಾಗೆ ಸಹಿ ಹಾಕಿದ್ದು, ಅದನ್ನು ವಿಶಾಲ್ ಭಾರದ್ವಾಜ್ ನಿರ್ದೇಶಿಸಬೇಕಿತ್ತು. ಹಾಗೆಯೇ ಸುಶಾಂತ್ ಸಿಂಗ್ ರಜಪೂತ್ ನಾಯಕತ್ವದ 'ತಕಡುಂ' ಎನ್ನುವ ಚಿತ್ರತಂಡ ಇರ್ಫಾನ್‌ಗಾಗಿ ಕಾಯುತ್ತಿದೆ. ಜರೀನ್ ಖಾನ್ ಜತೆಗೆ ನಾಯಕನಾಗಿ ಡಿವೈನ್ ಲುಕ್ ಚಿತ್ರಕ್ಕೂ ಇರ್ಫಾನ್ ಸಹಿ ಹಾಕಿದ್ದಾನೆ. ಎಲ್ಲರೂ ಇರ್ಫಾನ್ ಲಂಡನ್ನಿನಿಂದ ವಾಪಸ್ ಬರುವುದನ್ನೇ ಕಾಯುತ್ತಿದ್ದಾರೆ.

ಲಂಡನ್ನಿನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಲ್ಮಾನ್‌ನ ಇತ್ತೀಚಿನ ಫೋಟೋವೊಂದು ಪ್ರಕಟವಾಗಿದ್ದು, ಸಾಕಷ್ಟು ತೂಕ ಕಳೆದುಕೊಂಡಿದ್ದಾನೆ. ಲಂಡನ್ ಫಿಲಂ ಫೆಸ್ಟಿವಲ್‌ನಲ್ಲಿ ಆತನಿಗೆ 'ಸ್ಪೆಷಲ್ ಐಕಾನ್ ಪ್ರಶಸ್ತಿ' ಪ್ರಕಟವಾದದ್ದು ಅಭಿಮಾನಿಗಳಿಗೆ ಸ್ವಲ್ಪ ಸಂತಸ ತಂದಿದೆ.

■ ಬಿಂದು